ದಿನಾಂಕ: 28.03.2026
ಅಸಲುದಾವೆ: 97/2020
ಡಿ.ಡಬ್ಲ್ಯೂ: 2

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರಿದ ಪಾಟೀ ಸವಾಲು: ವಾದಿ ಪರ ವಕೀಲರಿಂದ:

ಕಳೆದ ವಾಯಿದೆಯಲ್ಲಿ ನೋಟ್ ಪುಸ್ತಕವನ್ನು ತೆಗೆದುಕೊಂಡು ಬರುವುದಾಗಿ ಹೇಳಿದ್ದೀರಿ, ತೆಗೆದುಕೊಂಡು ಬಂದಿದ್ದೀರಾ ಎಂದರೆ ಸಾಕ್ಷಿ ಹೌದು, ತೆಗೆದುಕೊಂಡು ಬಂದಿದ್ದೇನೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಅದನ್ನು ನಿಸಿ-1 ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯಲ್ಲಿ ಕೆ.ಟಿ.ಪುಟ್ಟಸ್ವಾಮಿ ಬಿನ್ ತಿಮ್ಮೇಗೌಡರವರಿಗೆ (2 ನೇ ಪ್ರತಿವಾದಿ) ಸಾಲ ಕೊಟ್ಟಿದ್ದೇವೆ ಎಂದು ಬರೆದಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ನಿಸಿ-1ರ ಒಂದೇ ಪುಟದಲ್ಲಿಯೇ ಇಂತಿಂಥ ದಿನಾಂಕದಂದು ಇಂತಿಷ್ಟು ಹಣ ಕೊಟ್ಟಿದ್ದೇವೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಹೌದು, ಮೊದಲು ಬೇರೆ ಪುಸ್ತಕ ಇತ್ತು, ಈಗ ಚೇಂಜ್ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಪುಸ್ತಕ ಖಾಲಿ ಆಗಿರಲಿಲ್ಲ , ನೀವು ಈ ಕೇಸಿಗೋಸ್ಕರ ಈ ಪುಸ್ತಕವನ್ನು ಸೃಷ್ಟಿಸಿ ಹಾಜರು ಪಡಿಸಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಪುಟ್ಟಸ್ವಾಮಿಯವರು ಕೆ.ಎಂ.ದೊಡ್ಡಿಯಲ್ಲಿ ವೈಯಕ್ತಿಕವಾಗಿ ಒಂದು ನಿವೇಶನವನ್ನು ಖರೀದಿಸಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಸಿ-1ರಲ್ಲಿ ಎಲ್ಲಿಯೂ ಕೂಡ ಪುನಿತ್ ಅವರ ಚಿಕಿತ್ಸೆಗಾಗಿ ಎಂದು ನಮೂದಿಲ್ಲ ಎಂದರೆ ಸರಿ. ಸದರಿ ಸಾಲ ಕೆ.ಟಿ.ಪುಟ್ಟಸ್ವಾಮಿಯವರಿಗೆ ವೈಯಕ್ತಿಕವಾಗಿ ಕೊಟ್ಟಿರುವ ಸಾಲ ಎಂದರೆ ಸಾಕ್ಷಿ ಇಲ್ಲ, ಪುಟ್ಟಸ್ವಾಮಿಯವರಿಗೆ, ತಿಮ್ಮೇಗೌಡರಿಗೆ ಪುನಿತ್ ಚಿಕಿತ್ಸೆಗಾಗಿ ಕೊಟ್ಟಿರುವಂತಹ ಸಾಲ ಎಂದು ಉತ್ತರಿಸುತ್ತಾರೆ.

2. 1 ನೇ ಪ್ರತಿವಾದಿ ತಿಮ್ಮೇಗೌಡರವರ ಹೆಸರಿನಲ್ಲಿ ಕೆ.ಎಂ.ದೊಡ್ಡಿಯಲ್ಲಿ ಹಲವಾರು ವಾಣಿಜ್ಯ ಕಟ್ಟಡಗಳು ಇವೆ ಎಂದರೆ ಸಾಕ್ಷಿ 2 ಕಡೆ ಇವೆ ಎಂದು ಉತ್ತರಿಸುತ್ತಾರೆ. ಆ ವಾಣಿಜ್ಯ ಕಟ್ಟಡಗಳು ಕೋಟ್ಯಾಂತರ ರುಪಾಯಿ ಬೆಲೆ ಬಾಳುತ್ತವೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಬ್ಯಾಂಕಿನಲ್ಲಿ ಆ ಕಟ್ಟಡಗಳನ್ನು ಅಡಮಾನ ಮಾಡಿ

ಸಾಲ ತೆಗೆದುಕೊಳ್ಳಬಹುದು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಹಾಗಾಗಿ ನಿಮ್ಮ ಬಳಿ ಕೈ ಸಾಲ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಲು ಆ ಟೈಮ್ ಗೆ ಆಗುವುದಿಲ್ಲ ಎಂದು ನನ್ನ ಬಳಿ ಸಾಲ ತೆಗೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ವಾದಿಯ ತಾಯಿ ದಿವ್ಯರವರು ಭಾಗ ಬರಬೇಕು ಎಂದು ಹೇಳಿ ಕೆ.ಎಂ.ದೊಡ್ಡಿ ಯಲ್ಲಿ ನ್ಯಾಯಾ ಪಂಚಾಯಿತಿ ಸೇರಿಸಿದ್ದರು, ಅದಕ್ಕೆ ನೀವೇನಾದರು ಸೇರಿದ್ದಿರಾ ಎಂದರೆ ಸಾಕ್ಷಿ ನಾನು ಸೇರಿರಲಿಲ್ಲ, ಆದರೆ ಪಂಚಾಯಿತಿ ಸೇರಿಸಿದ್ದ ವಿಚಾರ ಗೊತ್ತು ಎಂದು ಉತ್ತರಿಸುತ್ತಾರೆ. ಪುನಿತ್ ಅವರ ಚಿಕಿತ್ಸೆಗೆ ಸಾಲ ಕೊಟ್ಟಿದ್ದರೆ ನೀವು ಅವರ ಹೆಂಡತಿಯ ಸಹಿಯನ್ನು ನೋಟ್ ಬುಕ್ ನಲ್ಲಿ ತೆಗೆದುಕೊಳ್ಳಬೇಕಾಗಿತ್ತು ಎಂದರೆ ಸಾಕ್ಷಿ ಸಹಿ ತೆಗೆದುಕೊಂಡಿಲ್ಲ, ಪುನಿತ್ ಅವರ ತಂದೆ ಹಾಗೂ ಪುಟ್ಟಸ್ವಾಮಿಯವರನ್ನು ನೋಡಿ ಸಾಲ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ನೀಪವು ಪುನಿತ್ ಅವರ ತಂದೆಗೆ ಸಾಲ ಕೊಟ್ಟಿಲ್ಲ, ಪುಟ್ಟಸ್ವಾಮಿಯವರಿಗೆ ವೈಯಕ್ತಿಕವಾಗಿ ಸಾಲ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಪುಟ್ಟಸ್ವಾಮಿಯವರಿಗೆ ಸಾಲ ಕೊಟ್ಟಿರುವುದರಿಂದ ನೀವು ವಾದಿಯಿಂದ ಆಗಲಿ, ಅವರ ತಂದೆಯಿಂದಾಗಲಿ ವಸೂಲಿ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ ಹೌದು, ಪುಟ್ಟಸ್ವಾಮಿಯವರು ಕೊಡುತ್ತಾರೆ ಎಂದು ಉತ್ತರಿಸುತ್ತಾರೆ. ಪುನಿತ್ ಅವರ ಆರೋಗ್ಯದ ಖರ್ಚು ವೆಚ್ಚಗಳನ್ನು ವಾದಿಯ ತಾಯಿ ದಿವ್ಯರವರೇ ನೋಡಿಕೊಂಡಿದ್ದಾರೆ ಎಂದರೆ ಸುಳ್ಳು.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.